# ಹೆಂಗಳೆಯರ ಒಲವಿನ ಉಡುಪಿ ಸೀರೆ



ಬಹಳ ನಾಜೂಕಿನ ಕುಶಲತೆಯನ್ನು ಬೇಡುವ ಉಡುಪಿ ಸೀರೆಗೆ ಜಿಐ ಮಾನ್ಯತೆ ದೊರೆತು ಹತ್ತು ವರ್ಷಗಳೇ ಕಳೆದಿವೆ. ಸರಳ ವಿನ್ಯಾಸದ ಉಡುಪಿ ಸೀರೆಗಳು ಆರಾಮದಾಯಕವಷ್ಟೇ ಅಲ್ಲ ಬಾಳಿಕೆಯೂ ಉತ್ತಮವಾಗಿರುತ್ತವೆ. ಈ ಭಾಗದಲ್ಲಿ ಬಳುವಳಿಯಾಗಿ ಕೊಡುವ ವಸ್ತುಗಳಲ್ಲಿ 'ಉಡುಪಿ ಸೀರೆ'ಯೂ ಒಂದು.

■ ರೂಪಾ ಕೆ.ಎಂ.

ಕರ್ನಾಟಕದ ಕರಾವಳಿ ತೀರದುದ್ದಕ್ಕೂ 'ಉಡುಪಿ ಸೀರೆ' ಎಂದೇ ಖ್ಯಾತಿ ಪಡೆದಿರುವ, ಶುದ್ಧ ಒಂದೆಳೆ ಹತ್ತಿಯಲ್ಲಿ ತಯಾರಾಗುವ ಕೈಮಗ್ಗದ ಸೀರೆಗಳೆಂದರೆ ಹೆಂಗಳೆಯರಿಗೆ ಎಲ್ಲಿಲ್ಲದ ಪ್ರೀತಿ. ಬಿಸಿಲಿನ ಝಳಕ್ಕೆ ಈ ಸೀರೆ ಎಷ್ಟು ಆರಾಮದಾಯಕ ಎನಿಸುತ್ತದೆಯೆಂದರೆ, ಅದನ್ನು ಧರಿಸಿಯೇ ತಿಳಿಯಬೇಕು!


ಬಹಳ ನಾಜೂಕಿನ ಕುಶಲತೆಯನ್ನು ಬೇಡುವ ಈ ಸೀರೆಗೆ 2016ರಲ್ಲಿ ಜಿಐ ಮಾನ್ಯತೆ ದೊರೆತಿದೆ. ಸರಳ ವಿನ್ಯಾಸದ ಉಡುಪಿ ಸೀರೆಗಳು ಆರಾಮದಾಯಕವಷ್ಟೆ ಅಲ್ಲ ಅವುಗಳ ಬಾಳಿಕೆಯೂ ಉತ್ತಮವಾಗಿರುತ್ತದೆ. ಈ ಭಾಗದಲ್ಲಿ ಬಳುವಳಿಯಾಗಿ ಕೊಡುವ ವಸ್ತುಗಳಲ್ಲಿ 'ಉಡುಪಿ ಸೀರೆ'ಯೂ ಒಂದು. ಸೀರೆ ಉಟ್ಟು ಹಳತಾದರೆ, ಹಾಸುವ, ಹೊದೆಯುವ ವಸ್ತ್ರವಾಗಿ, ಶಿಶುಗಳನ್ನು ಮಲಗಿಸುವ ಬೆಚ್ಚಗಿನ ಕೌದಿಯಾಗಿ, ಕೊನೆಗೆ ಅಡುಗೆ ಮನೆಗೆ ಕೈ ವಸ್ತ್ರವಾಗಿಯೂ ಬಳಸಲಾಗುತ್ತದೆ. ಪರಿಸರಕ್ಕೆ ಯಾವುದೇ ದೊಡ್ಡ ಹಾನಿ ಮಾಡದೇ ಹೀಗೆ ಮಣ್ಣಿನಲ್ಲಿ ಮಣ್ಣಾಗಿ ಹೋಗುವ ಪರಿಸರಸ್ನೇಹಿ ಸೀರೆಯಿದು.

ಮಹಾತ್ಮ ಗಾಂಧೀಜಿ ನೇತೃತ್ವದ ಖಾದಿ, ಕೈಮಗ್ಗ ಬಟ್ಟೆಗಳು ಹೆಚ್ಚು ಪ್ರಚಲಿತಗೊಂಡ ಸಮಯದಲ್ಲಿ ಈ ಸೀರೆಯನ್ನು ನೇಯುವ ಕಸುಬಿಗೂ ಪ್ರಾಮುಖ್ಯ ದೊರಕಿತು. ಉಭಯ ಜಿಲ್ಲೆಗಳಲ್ಲಿ ಹಿಂದೆ ಐದು ಸಾವಿರಕ್ಕೂ ಹೆಚ್ಚು ಕುಟುಂಬಗಳು ಇದನ್ನು ನೇಯುವ ಕಾರ್ಯವನ್ನೇ ನೆಚ್ಚಿಕೊಂಡಿದ್ದವು. ಎಂಟು ಸುವ್ಯವಸ್ಥಿತ ಸಹಕಾರಿ ಸಂಘಗಳ ಮೂಲಕ ಈ ಉದ್ಯಮ ನಡೆಯುತ್ತಿತ್ತು. ಆಧುನೀಕರಣದ ಹಲವು ಸವಾಲುಗಳಿಂದಾಗಿ ಎರಡು ದಶಕಗಳಿಂದೀಚೆಗೆ ಉದ್ಯಮವು ಅಳಿವಿನಂಚಿಗೆ ತಲುಪಿತು.

## ಏನಿದರ ವಿಶೇಷ?

ಸೀರೆಯ ಸೆರಗು ಮತ್ತು ಅಂಚು ಗಾಢ ಬಣ್ಣದಲ್ಲಿದ್ದರೆ, ಉಳಿದದ್ದು ತಿಳಿಯಾಗಿರುತ್ತದೆ. ಕೈಯಿಂದ ಅಡ್ಡ ನೂಲು ಹಾಯಿಸಿ ಬುಟ್ಟಾವನ್ನು ನೇಯಲಾಗುತ್ತದೆ. ಪುಟ್ಟ ಪುಟ್ಟ ಬುಟ್ಟಾಗಳಿಂದ ಬಲು ಮುದ್ದಾಗಿ ಕಾಣುವ ಸೀರೆಯಿದು. ನೋಡಲು ಎಷ್ಟು ಸರಳವೋ, ಉಟ್ಟರೆ ಅಷ್ಟೆ 'ಎಲಿಗೆಂಟ್' ಲುಕ್ ನೀಡುತ್ತದೆ. ಬಾಸೆಲ್ ಮಿಷನ್ ಪರಿಚಯಿಸಿದ ಮಲಬಾರ್ ಫ್ರೇಮ್ ಮಗ್ಗದಲ್ಲಿ ಚೌಕುಳಿ ಅಥವಾ ಸಾದಾ ವಿನ್ಯಾಸದಲ್ಲಿ ಒಂದೆಳೆಯ ಹತ್ತಿಯ ನೂಲನ್ನು ಬಳಸಿ ನೇಯಲಾಗುತ್ತದೆ. ಸೆರಗಿನ ಭಾಗಗಳನ್ನು ಮಾತ್ರ ಕಟ್ಟಿ ಬಣ್ಣದಲ್ಲಿ ಮುಳುಗಿಸಲಾಗುತ್ತದೆ. ಈ ರೀತಿ ಬಣ್ಣ ಹಾಕಿದ ಹಾಸನ್ನು ಮಗ್ಗಕ್ಕೆ ಜೋಡಿಸಿದ ನಂತರ ಸೀರೆಗಳನ್ನು ನೇಯಲಾಗುತ್ತದೆ. ನೇಯುವ ಸಂದರ್ಭದಲ್ಲಿ ಬಗಿನೆ ಮರದ ಗರಿಯ ಭಾಗಗಳಿಂದ ಮಾಡಿದ ವಿಶೇಷ ಬ್ರಶ್ ಬಳಸಿ ಮಗ್ಗದ ಮೇಲೆ ನೇಯಲಿರುವ ನೂಲಿಗೆ ಗಂಜಿಯನ್ನು ಹಾಕಲಾಗುತ್ತದೆ.

ಯಕ್ಷ ಸೀರೆ



## ಕಸೆ ಸೀರೆ

ಉಡುಪಿ ಸೀರೆ ಸಂಗ್ರಹ ಮಾಡುವಾಗ ಕಸೆ ಸೀರೆ ಇದ್ದರಷ್ಟೇ ಆ ಸಂಗ್ರಹಕ್ಕೆ ಇನ್ನಷ್ಟು ಮೆರುಗು ಬರುತ್ತದೆ. ಈ ವಿನ್ಯಾಸದ ಸೀರೆಗೆ ಯಕ್ಷಸೀರೆ ಎಂದೂ ಕರೆಯಲಾಗುತ್ತದೆ. ಹಳದಿ ಮತ್ತು ಕೆಂಪು ಬಣ್ಣಗಳ ವಿಶಿಷ್ಟ ಚೌಕಟ್ಟುಗಳೊಂದಿಗೆ ಕಾಣುವ ಈ ಅದ್ಭುತ ನೇಯ್ಗೆ, ದಪ್ಪವಾದ ಕಪ್ಪು ಅಂಚುಗಳನ್ನು ಹೊಂದಿದ್ದು, 40 ಕೌಂಟ್ ಸಿಂಗಲ್ ಪ್ಲೈ ಹತ್ತಿಯಲ್ಲಿ ನೇಯಲಾಗುತ್ತದೆ. ಸಾಂಪ್ರದಾಯಿಕವಾಗಿ ಯಕ್ಷಗಾನ ಕಲಾವಿದರು 8.25 ಮೀಟರ್ ಉದ್ದದ ಕಸೆ ಸೀರೆಯನ್ನು ಧರಿಸುತ್ತಾರೆ. ಇದರಲ್ಲಿ ಗಟ್ಟಿಯಾದ ಕಟ್ ಬಾರ್ಡರ್ ತಂತ್ರವಿದ್ದು, ಪಲ್ಲುವಿನಲ್ಲಿ ಯಾವುದೇ ವಿಶೇಷ ವಿನ್ಯಾಸ ಇರುವುದಿಲ್ಲ. ಈಗೀಗ ಫ್ಯಾಷನ್ ಲೋಕದಲ್ಲಿ ಕಸೆ ಸೀರೆಗೆ ಎಲ್ಲಿಲ್ಲದ ಬೇಡಿಕೆ ಬರುತ್ತಿದೆ. ಇನ್ನು ಬಡಗುತಿಟ್ಟು ಯಕ್ಷಗಾನ ಪರಂಪರೆಯಲ್ಲಿ ಉಡುಪಿಯ ಸಾಂಪ್ರದಾಯಿಕ ಕೈಮಗ್ಗ ಕಸೆ ಸೀರೆಗೆ ತನ್ನದೇ ಆದ ಮಹತ್ವದ ಸ್ಥಾನವಿದೆ.

## ಕಮಲಾದೇವಿ 'ಯಕ್ಷಸೀರೆ' ನೆನಪು

ಕಸೆ ಸೀರೆಯ ಅತಿ ದೊಡ್ಡ ಅಭಿಮಾನಿಯಾಗಿದ್ದ ಸ್ವಾತಂತ್ರ್ಯ ಹೋರಾಟಗಾರ್ತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರಿಗೆ, ಬ್ರಹ್ಮಾವರ ಸಹಕಾರ ಸಂಘದ ರಾಷ್ಟ್ರೀಯ ಪ್ರಶಸ್ತಿ ವಿಜೇತ ದಿವಂಗತ ನೇಕಾರ ಮಂಜುನಾಥ ಶೆಟ್ಟಿಗಾರ್ ಅವರು ವಿಶೇಷವಾಗಿ ನೇಯ್ದ 'ಯಕ್ಷ ಸೀರೆ'ಯನ್ನು ಉಡುಗೊರೆಯಾಗಿ ನೀಡಿದ್ದರು. ಅದನ್ನು ಕಮಲಾದೇವಿ ಅವರು ಜತನದಿಂದ ಕಾಪಿಟ್ಟುಕೊಂಡಿದ್ದರು. ಇನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಗಳ ಮದುವೆಗೆ ಉಡುಪಿಯ ಅದಮಾರು ಮಠದಿಂದ 'ಉಡುಪಿ ಸೀರೆ'ಯನ್ನು ಉಡುಗೊರೆಯಾಗಿ ನೀಡಲಾಗಿತ್ತು.

ಕಮಲಾದೇವಿ ಚಟ್ಟೋಪಾಧ್ಯಾಯ